4. ಅಧ್ಯಕ್ಷರ ಅಪ್ಪಣೆ ಮೇರೆಗೆ

ವಿಷಯ: ತಮಿಳ್ನಾಡಿನವರು ಕಾವೇರಿ ನೀರು ಬಿಡಬೇಕೆಂದು ರಾಜಕೀಯ ಮಾಡುತ್ತಿರುವ ಬಗ್ಗೆ.

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ): ಒಂದು ನಿಮಿಷ. ಮಾನ್ಯ ಉಪಾಧ್ಯಕ್ಷರೆ, ನಾನು ಬೆಳಿಗ್ಗೆ ಕೂಡ ಈ ಬಗ್ಗೆ ಸರ್ಕಾರದ ಗಮನ ಸೆಳೆದೆ. ಈಗ ತಮಿಳುನಾಡಿನಲ್ಲಿ ತೀವ್ರವಾದಂತಹ ಹೋರಾಟ ಆರಂಭ ಮಾಡಿದ್ದಾರೆ. ಇದೇನು? ನೀರಿಗಿಂತ ಹೆಚ್ಚಾಗಿ ರಾಜಕೀಯ, ನೀರಲ್ಲ ಅವರಿಗೆ ಬೇಕಾಗಿರತಕ್ಕಂಥದ್ದು, ರಾಜಕೀಯ. ಈಗಾಗಲೇ ಎರಡು ಪಕ್ಷಗಳವರು, AIADMK ಯವರು ಮತ್ತು DMKಯವರು ಮಾನ್ಯ ಪ್ರಧಾನ ಮಂತ್ರಿಗಳನ್ನು ಭೇಟಿ ಮಾಡಿವೆ. ಒಂದು ಪಕ್ಷ ಅವರನ್ನು ಭೇಟಿಯಾಗಿ ಬಂದ ನಂತರ ಇನ್ನೊಂದು ಪಕ್ಷ ಅವರನ್ನು ಭೇಟಿಯಾಗಿದೆ. ಈ ರೀತಿ ಕರ್ನಾಟಕವನ್ನು ಬಲಿಪಶು ಮಾಡುವಂತಹ ಯತ್ನ ನಡೆದಿದೆ. ನಾವು ನೀರನ್ನು ಯದ್ವಾತದ್ವಾ ಬಿಡುತ್ತಲೇ ಇದ್ದೇವೆ. ಅದರಲ್ಲೇನೂ ಬೇರೆ ಮಾತೇ ಇಲ್ಲ. ಇವತ್ತು ಸಿಕ್ಕಾಪಟ್ಟೆ ನೀರು ಹೋಗುತ್ತಿದೆ. ಎಷ್ಟು ಹೋಗಿದೆ ಎಂಬುದನ್ನು ನಾನು ತಮಗೆ ಹೇಳುತ್ತಿದ್ದೇನೆ. ಇವತ್ತು ಮತ್ತೆ ತಮಿಳುನಾಡಿನ ಮುಖ್ಯಮಂತ್ರಿ ಜಯಲಲಿತಾರವರು ಮಾನ್ಯ ಪ್ರಧಾನ ಮಂತ್ರಿಯವರನ್ನು ಭೇಟಿ ಮಾಡಿಕೊಂಡು ಬಂದು, ಅವರಿಗೆ ಹಾರ, ತುರಾಯಿ ಹಾಕಿ, ಶಾಲು ಹೊದಿಸಿ, ಅಭಿನಂದನೆ ಸಲ್ಲಿಸಿ, ಹೊರಗಡೆ ಬಂದು, ನಮಗೆ ಮಾನ್ಯ ಪ್ರಧಾನ ಮಂತ್ರಿಗಳವರಲ್ಲಿ ನಂಬಿಕೆ ಇಲ್ಲ ಎಂದು ಹೇಳಿ, ಇವತ್ತು ತಮಿಳುನಾಡಿನಲ್ಲಿ ಚಳವಳಿಯನ್ನು ಆರಂಭ ಮಾಡಿದ್ದಾರೆ, ನೇರವಾಗಿ ಚಳವಳಿಯನ್ನು ಆರಂಭ ಮಾಡಿದ್ದಾರೆ. ಏಕೆ? ಯಾವ ಕಾರಣಕ್ಕಾಗಿ ಆರಂಭ ಮಾಡಿರತಕ್ಕಂಥದ್ದು? ಅದು ಒಳ್ಳೆಯ ಸೂಚನೆಯಲ್ಲ. ನಾನು ತಮಗೆ ಹೇಳುತ್ತಿದ್ದೇನೆ, ಈಗ ಕಬಿನಿ ಜಲಾಶಯದ ಪೂರ್ಣ ಮಟ್ಟ ಇರಬೇಕಾದುದು 2284 ಅಡಿ. ಈಗ ಇರುವುದು 2280.89 ಅಡಿಗಳು. ಒಳ ಹರಿವು 4160, ಹೊರ ಹರಿವು 3582. ಇದುವರೆಗೂ ಹೋಗಿರುವುದು ಎಷ್ಟು? ಇದುವರೆಗೆ ಅವರಿಗೆ ಎಷ್ಟು ಹೋಗಬೇಕು ಎನ್ನುವುದನ್ನು ನ್ಯಾಯ ಮಂಡಳಿ ತೀರ್ಮಾನ ಮಾಡಿದೆ. ಇದುವರೆಗೂ ಹೋಗಿರತಕ್ಕಂಥದ್ದು ಸುಮಾರು 38.32 ಟಿಎಂಸಿ. ಒಟ್ಟು ನಾವು ಅವರಿಗೆ 48 ಟಿಎಂಸಿ ನೀರನ್ನು ಬಿಡಬೇಕಾಗಿದೆ. ಇದುವರೆಗೂ ಹೋಗಿರತಕ್ಕಂಥದ್ದು 36–37 ಟಿಎಂಸಿ ನೀರು. ಅದು ಈಗಾಗಲೇ ಹೊರಟು ಹೋಗಿದೆ. ಅಂದರೆ ನಿತ್ಯ ಹೋಗುತ್ತಿದೆ. ನಮ್ಮ ಪ್ರಕಾರ ಇವತ್ತು ಅಥವಾ ನಾಳೆಯೊಳಗೆ ಕಬಿನಿಯಿಂದ ಹೋಗತಕ್ಕಂಥ ನೀರು ಅವರ ಬೇಡಿಕೆಯನ್ನು ಮೀರಿ ಹೊರಟು ಹೋಗುತ್ತದೆ. ಇಷ್ಟೆಲ್ಲಾ ಇದ್ದರೂ ಜಯಲಲಿತಾರವರು ಮತ್ತು ಕರುಣಾನಿಧಿಯವರು ಈ ತರಹ ರಾಜಕಾರಣ ಮಾಡತಕ್ಕಂಥದ್ದು ಸರಿಯಲ್ಲ. ಏನಿದು? ನನಗೆ ಅರ್ಥವಾಗುವುದಿಲ್ಲ. ಇಡೀ ದೇಶದ ಜನ ನೋಡಬೇಕು, ಲೋಕಸಭೆ ನಡೆಯುತ್ತಿದೆ, ಮಾನ್ಯ ಪ್ರಧಾನ ಮಂತ್ರಿಗಳು ನೋಡಬೇಕು, ವಿರೋಧ ಪಕ್ಷದ ಮುಖಂಡರುಗಳು ನೋಡಬೇಕು ಎಂದು ಈ ರೀತಿ ಮಾಡುತ್ತಿದ್ದಾರೆ. ಕಾಲು ಕೆರೆದು ಕರ್ನಾಟಕದ ಮೇಲೆ ಗೂಬೆ ಕೂರಿಸತಕ್ಕಂಥ, ಕರ್ನಾಟಕಕ್ಕೆ ಕೆಟ್ಟ ಹೆಸರು ತರತಕ್ಕಂಥ ಪ್ರಯತ್ನ ಮಾಡುತ್ತಿದ್ದಾರೆ. ಕರ್ನಾಟಕದ ರೈತರು, ತಮಿಳುನಾಡಿನ ರೈತರು, ಉತ್ತರ ಪ್ರದೇಶದ ರೈತರು, ರೈತರೆಲ್ಲಾ ಒಂದೇ. ಈ ರೈತರಲ್ಲಿ ರಾಜಕೀಯ ಇಲ್ಲ ರಾಜಕಾರಣ ಮಾಡುತ್ತಿರತಕ್ಕಂಥವರು AIADMK ಮತ್ತು DMKಯವರು. ನಾವು ಇವತ್ತು ಅದೇ ರಾಜಕಾರಣವನ್ನು ಮುಂದುವರೆಸಿದರೆ, ಜಯಲಲಿತಾರವರು ಇರಬಹುದು, ಕರುಣಾನಿಧಿಯವರು ಇರಬಹುದು, ಮುಂದುವರೆಸಿದರೆ, ಕರ್ನಾಟಕದಲ್ಲೂ ತೀವ್ರವಾದಂತಹ ಹೋರಾಟ ನಡೆಸಬೇಕಾಗುತ್ತದೆ. ನಿಮ್ಮ ರಾಜಕೀಯವನ್ನು ಕೈಬಿಡಿ ಎಂದು ಈ ಸದನದ ಮೂಲಕ ಒತ್ತಾಯ ಮಾಡುತ್ತಿದ್ದೇನೆ.

ಶ್ರೀ ಕೆ.ಎಸ್. ಈಶ್ವರಪ್ಪ (ಶಿವಮೊಗ್ಗ): ಮಾನ್ಯ ಉಪಾಧ್ಯಕ್ಷರೆ, ಮಾನ್ಯ ವಾಟಾಳ್ ನಾಗರಾಜ್‌ರವರು ಪ್ರಸ್ತಾಪ ಮಾಡುತ್ತಿರುವುದನ್ನು ಇಡೀ ಕರ್ನಾಟಕ ರಾಜ್ಯದ ಜನ ನೋಡುತ್ತಿದ್ದಾರೆ. ತಮಿಳುನಾಡಿನಲ್ಲಿ ಡಿ.ಎಂ.ಕೆ. ಮತ್ತು ಅಣ್ಣಾ ಡಿ.ಎಂ.ಕೆ. ಯವರು ಮಾಡುತ್ತಿರುವುದು ಕೇವಲ ರಾಜಕಾರಣಕ್ಕೋಸ್ಕರವೇ. ಅವರಲ್ಲಿ ಚುನಾವಣೆ ಹತ್ತಿರ ಬರುತ್ತಿದೆ. ಚುನಾವಣೆಯಲ್ಲಿ ತಮಿಳುನಾಡಿನ ಜನರನ್ನು ತೃಪ್ತಿಪಡಿಸಬೇಕೆಂದು ಅವರು ಈ ರೀತಿ ಮಾಡುತ್ತಿದ್ದಾರೆ. ಅವರಿಗೆ ನೀರು ಬೇಡ, ರಾಜಕಾರಣದ ಕುರ್ಚಿ ಬೇಕಾಗಿದೆ. ಅದಕ್ಕೋಸ್ಕರ ಮಾಡುತ್ತಿರುವಂತಹ ಆಟ ಇದಾಗಿದೆ. ಇವತ್ತು ಏಕೆ ಇದನ್ನು ನಾವು ತಮ್ಮ ಮುಂದೆ ಪ್ರಸ್ತಾಪ ಮಾಡುತ್ತಿದ್ದೇವೆ ಎಂದರೆ, ಅವರು ಮಾಡುತ್ತಿರುವಂತಹ ರಾಜಕೀಯ ನೀರಿಗೆಲ್ಲ, ರಾಜಕಾರಣಕ್ಕೆ ಎಂದು ತುಂಬಾ ಸ್ಪಷ್ಟವಾಗಿ ನಿಮಗೆ ಗೊತ್ತಿದೆ. ಇವತ್ತು ಏಕೆ ನಮ್ಮ ಒತ್ತಾಯ ಎಂದರೆ, ಹಿಂದಿನ ಸರ್ಕಾರದಲ್ಲಿ, ಅಂದಿನ ಮುಖ್ಯಮಂತ್ರಿಗಳಾಗಿದ್ದ ಸನ್ಮಾನ್ಯ ಎಸ್.ಎಂ. ಕೃಷ್ಣರವರು ನೇರವಾಗಿ ಹೇಳಿದರು, ಕುರ್ಚಿ ಹೋದರೂ ಚಿಂತೆ ಇಲ್ಲ, ನಾನು ನೀರು ಬಿಡುವುದಿಲ್ಲ ಎಂದು. ಸನ್ಮಾನ್ಯ ಎಂ.ಪಿ. ಪ್ರಕಾಶ್‌ರವರೆ, ಇದು ತಮಗೂ ಗೊತ್ತಿದೆ. ಹಾಗಾಗಿ ಸನ್ಮಾನ್ಯ ಉಪಾಧ್ಯಕ್ಷರೆ, ಇವತ್ತು ಇಡೀ ಕರ್ನಾಟಕ ರಾಜ್ಯದಲ್ಲಿ ಈ ಒಂದು ಸರ್ಕಾರವೂ ಕೂಡ ಮತ್ತೆ ರಾಜಕಾರಣ ಮಾಡಿ ರಾಜ್ಯದ ಜನತೆಗೆ ದ್ರೋಹ ಮಾಡಬಾರದು. ಏಕೆಂದರೆ, ಇವತ್ತು ಏನು ನೀರು ತಲುಪಬೇಕೋ, ಅದಕ್ಕಿಂತ ನೀರು ಹೆಚ್ಚಿಗೆ ಹೋಗುವಂತಹ ಸಂದರ್ಭದಲ್ಲಿ, ಇವರೇನಾದರೂ ಕೂಡ ಬಿಡುವುದಿಲ್ಲ ಎನ್ನುವಂತಹ ಮಾತನ್ನು ಇಲ್ಲಿ ಹೇಳಿ, ಮತ್ತೆ ರಾಜಕಾರಣ ಮಾಡಿ, ಎಸ್.ಎಂ. ಕೃಷ್ಣರವರು ಮಾಡಿದಂತಹ ರಾಜಕಾರಣ ಮಾಡಿದರೆ, ಎಸ್.ಎಂ. ಕೃಷ್ಣರವರಿಗೆ ಏನು ಗತಿ ಬಂತೋ, ನಿಮಗೂ ಮತ್ತೆ ಅದೇ ಗತಿ ಬರುತ್ತದೆ. ನಾನು ಏಕೆ ಈ ಮಾತನ್ನು ಹೇಳುತ್ತಿದ್ದೇನೆ ಎಂದರೆ, ಈ ಚುನಾವಣೆ, ರಾಜಕಾರಣ, ಇದರಲ್ಲಿ ನೀರನ್ನು ಬೆರೆಸಿಕೊಂಡು, ನೀರಿನ ಮುಖಾಂತರ ಏನಾದರೂ ನಾನು ಅಧಿಕಾರಕ್ಕೆ ಬರುತ್ತೇನೆ ಎನ್ನುವಂತಹ ನಾಟಕ ಮಾಡಿದರೆ, ಖಂಡಿತ ಮುಖ್ಯಮಂತ್ರಿ ತಮ್ಮ ಸ್ಥಾನವನ್ನು ಕಳೆದುಕೊಳ್ಳುತ್ತಾರೆ, ಶಾಸಕ ಸ್ಥಾನವನ್ನೂ ಕಳೆದುಕೊಳ್ಳುತ್ತಾರೆ. ಈ ಎಚ್ಚರಿಕೆಯನ್ನು ಕೊಡುತ್ತಾ ಇಡೀ ಕರ್ನಾಟಕ ರಾಜ್ಯದ ಜನತೆಗೆ, ಕರ್ನಾಟಕ ರಾಜ್ಯದ ರೈತರಿಗೆ ನಾವು ಯಾವುದೇ ಕಾರಣಕ್ಕೂ ಕೂಡ ದ್ರೋಹ ಮಾಡುವುದಿಲ್ಲ, ಯಾವುದೇ ಕಾರಣಕ್ಕೂ ನೀರಿನ ವಿಚಾರದಲ್ಲಿ ದ್ರೋಹ ಮಾಡುವುದಿಲ್ಲ, ಈ ಆಶ್ವಾಸನೆಯನ್ನು ತಾವು ಕೊಡಬೇಕು, ಅದೇ ಪ್ರಕಾರ ನಡೆದುಕೊಳ್ಳಬೇಕು ಎನ್ನುವಂತಹ ಮಾತನ್ನು ತಮ್ಮ ಮೂಲಕ ಸರ್ಕಾರಕ್ಕೆ ಹೇಳಲಿಕ್ಕೆ ಇಚ್ಛಿಪಡುತ್ತೇನೆ.

(ಗೊಂದಲ)

ಉಪಾಧ್ಯಕ್ಷರು: ದಯವಮಾಡಿ ಕುಳಿತುಕೊಳ್ಳಬೇಕು. ಇನ್ನೂ ಬೇರೆಯವರು ಮಾತನಾಡುವವರಿದ್ದಾರೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: . . . ಆಂಧ್ರದವರು ನಮ್ಮ ಹಿತವನ್ನು ಬಲಿ ತೆಗೆದುಕೊಳ್ಳುತ್ತಿದ್ದಾರೆ. ಮಹಾರಾಷ್ಟ್ರದವರು ನಮ್ಮ ಹಿತವನ್ನು ಕಾಪಾಡುವುದಕ್ಕೆ ವಿರುದ್ಧವಾಗಿದ್ದಾರೆ...

(ಗೊಂದಲ)

ಶ್ರೀ ವಾಟಾಳ್ ನಾಗರಾಜ್: . . . ತಮಿಳುನಾಡಿನವರ ನೀತಿ ಸರಿಯಲ್ಲ. ಕರುಣಾನಿಧಿ ಇರಬಹುದು ಅಥವಾ ಜಯಲಲಿತಾ ಇರಬಹುದು, ಅವರು ರಾಜಕೀಯ ಮಾಡುವುದು ಸರಿಯಲ್ಲ. ಅದನ್ನು ಪ್ರತಿಭಟಿಸಿ ನಾನು ಧರಣಿ ಮಾಡುತ್ತಿದ್ದೇನೆ. . . . . .

(ಈ ಹಂತದಲ್ಲಿ ಮಾನ್ಯ ಸದಸ್ಯರಾದ ವಾಟಾಳ್ ನಾಗರಾಜ್‌ರವರು ಸದನದ ಬಾವಿಯಲ್ಲಿ ಧರಣಿ ನಿರತರಾದರು)

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: . . . ಮಹಾರಾಷ್ಟ್ರ, ಆಂಧ್ರ, ಗೋವಾ, ತಮಿಳುನಾಡು ಇವೆಲ್ಲವೂ ಕೂಡ ಕರ್ನಾಟಕದ ವಿರುದ್ಧವಾಗಿವೆ. ನೀರಾವರಿ ಯೋಜನೆಗಳಲ್ಲಿ ನಮ್ಮ ರಾಜ್ಯದ ಹಿತವನ್ನು ಕಾಪಾಡಿಕೊಳ್ಳುವುದರಲ್ಲಿ ಈ ಸರ್ಕಾರ ವಿಫಲವಾಗಿದೆ. ಮಹಾರಾಷ್ಟ್ರಕ್ಕೆ ಇವರು ಬಲಿಯಾಗುತ್ತಿದ್ದಾರೆ, ...

(ಗೊಂದಲ)

ಉಪಾಧ್ಯಕ್ಷರು: ಎಲ್ಲರೂ ಕೇಳುತ್ತಿರುವುದು ಒಂದೇ. ಈಗ ನೀವು ಕೇಳಿದ್ದು ಸರ್ಕಾರಕ್ಕೆ ಅರ್ಥವಾಗಿದೆ. ಅದಕ್ಕೆ ಅವರು ಉತ್ತರ ಕೊಡುತ್ತಾರೆ. ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ.

(ಗೊಂದಲ)

ಉಪಾಧ್ಯಕ್ಷರು: ಮಾನ್ಯ ನಾರಾಯಣಸ್ವಾಮಿ ಮತ್ತು ಮಾನ್ಯ ಅಶೋಕ್‌ರವರೆ, ದಯಮಾಡಿ ಕುಳಿತುಕೊಳ್ಳಿ. ಮಾನ್ಯ ಸಚಿವರು ಏನು ಉತ್ತರ ಕೊಡುತ್ತಾರೋ ನೋಡಿ.

(ಗೊಂದಲ)

ಶ್ರೀ ಎಂ.ಪಿ. ಪ್ರಕಾಶ್ (ಕಂದಾಯ ಸಚಿವರು): ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಹಿರಿಯ ಸದಸ್ಯರಾದ ವಾಟಾಳ್ ನಾಗರಾಜ್‌ರವರು ಮತ್ತು ಈಶ್ವರಪ್ಪನವರು ಹಾಗೂ ಇತರರೆಲ್ಲರೂ ಈ ವಿಷಯವನ್ನು ಇಲ್ಲಿ ಪ್ರಸ್ತಾಪ ಮಾಡಿದ್ದಾರೆ. ತಮಿಳುನಾಡಿನಲ್ಲಿ ಅವರ . . .

ಉಪಾಧ್ಯಕ್ಷರು: ಒಂದು ನಿಮಿಷ. ಮಾನ್ಯ ವಾಟಾಳ್‌ರವರೆ, ತಾವು ದಯವಿಟ್ಟು ತಮ್ಮ ಸ್ಥಾನಕ್ಕೆ ಹೋಗಬೇಕು. ತಾವು ಪ್ರಸ್ತಾಪಿಸಿದ್ದಕ್ಕೆ ಮಾನ್ಯ ಸಚಿವರು ಈಗ ಉತ್ತರ ಕೊಡುತ್ತಿದ್ದಾರೆ.

ಶ್ರೀ ಎಂ.ಪಿ. ಪ್ರಕಾಶ್: ದಯವಿಟ್ಟು ತಾವು ತಮ್ಮ ಸ್ಥಾನಕ್ಕೆ ಬನ್ನಿ, ನಿಮ್ಮ ಜೊತೆಗೆ ನಾವಿದ್ದೇವೆ. ಆದ್ದರಿಂದ ನೀವೇನೂ ಕಾಳಜಿ ಮಾಡತಕ್ಕಂಥ ಅಗತ್ಯ ಇಲ್ಲ.

(ಈ ಹಂತದಲ್ಲಿ ಸದನದ ಬಾವಿಯಲ್ಲಿ ಧರಣಿ ನಿರತರಾಗಿದ್ದ ಮಾನ್ಯ ಸದಸ್ಯರಾದ ವಾಟಾಳ್ ನಾಗರಾಜ್‌ರವರು ಧರಣಿ ಹಿಂತೆಗೆದುಕೊಂಡು ತಮ್ಮ ಸ್ಥಾನಕ್ಕೆ ಮರಳಿದರು)

ಶ್ರೀ ಎಂ.ಪಿ. ಪ್ರಕಾಶ್: ಸನ್ಮಾನ್ಯ ಉಪಾಧ್ಯಕ್ಷರೆ, ಅವರು ತಮ್ಮದೇ ಆದಂತಹ ಓಟಿನ ರಾಜಕಾರಣಕ್ಕಾಗಿ ಆ ರೀತಿ ಮಾಡುತ್ತಿದ್ದಾರೆ. ಅಲ್ಲಿ ಒಮ್ಮೆ ಪ್ರತಿಪಕ್ಷದ ನಾಯಕರಾದಂತಹವರು ಮುಖ್ಯಮಂತ್ರಿಗಳಾಗುತ್ತಾರೆ, ಒಬ್ಬರು ಮುಖ್ಯಮಂತ್ರಿಗಳಾದಂತಹವರು ಪ್ರತಿಪಕ್ಷದ ನಾಯಕರಾಗುತ್ತಾರೆ, ಅವರು ನಿರಂತರವಾಗಿ ಇರತಕ್ಕಂಥ ಆ ಒಂದು ರಾಜಕೀಯದ ಕಾರಣಕ್ಕಾಗಿ, ಕಾವೇರಿ ಎನ್ನುವರಿತಾದ್ದು ಒಂದು ಬಳಸುವಂತಹ ಕೋಲಾಗಿದೆ. ನಾಯಿ ಹೊಡೆಯಲಿಕ್ಕೆ ಯಾವ ಕೋಲಾದರೇನು ಎನ್ನುವಂತಹ ಗಾದೆ ಮಾತಿನಂತೆ, ವಿನಾಕಾರಣವಾಗಿ ಗದರಿಸುವ ತಂತ್ರವನ್ನು ಅವರು ಉಪಯೋಗಿಸುತ್ತಿದ್ದಾರೆ. ಒಂದು ಸುಳ್ಳನ್ನು ಹತ್ತು ಬಾರಿ ಹೇಳಿದರೆ, ಅದು ಸತ್ಯವಾಗುತ್ತದೆ ಎಂದು ಅವರು ಪರಿಭಾವಿಸಿಕೊಂಡಿದ್ದಾರೆ. ಆದರೆ ಸತ್ಯ ಸಂಗತಿ ಏನು ಎಂಬುದು ಮಾನ್ಯ ಪ್ರಧಾನ ಮಂತ್ರಿಗಳಿಗೂ ಕೂಡ ಮನವರಿಕೆಯಾಗಿದೆ. ನ್ಯಾಯಾಧಿಕರಣದಲ್ಲಿ ನಮ್ಮ ಸರ್ಕಾರದ ನಿಲುವನ್ನು ಸಂಪೂರ್ಣವಾಗಿ ನಾವು ಪ್ರತಿಪಾದಿಸಿದ್ದೇವೆ. ಮಾನ್ಯ ಮುಖ್ಯಮಂತ್ರಿಗಳು ಆಗಲೇ ಈ ಬಗ್ಗೆ ಹೇಳಿಕೆಯನ್ನು ಕೊಟ್ಟಿದ್ದಾರೆ. ತಾವು ಆಗಲೇ ಪ್ರಸ್ತಾಪ ಮಾಡಿದಂತೆ, ಕಬಿನಿಯಿಂದ ಎಲ್ಲಾ ನೀರೂ

ಕೂಡ ಹೊರಟು ಹೋಗಿದೆ. ನಮಗೆ, ದೈವ ಕೃಪೆಯಿಂದ, ವರುಣನ ಕೃಪೆಯಿಂದ, ನಮ್ಮ catchment area ದಲ್ಲಿ ಚೆನ್ನಾಗಿ ಮಳೆ ಆಗುತ್ತಿರತಕ್ಕಂಥ ಕಾರಣ ಇರುವುದರಿಂದ, ಕಬಿನಿಯಿಂದ ಬಹಳ ನೀರನ್ನು ನಾವು ಈಗ ಬಿಡಬೇಕಾಗಿದೆ. ಅಲ್ಲಿಂದ ನೀರನ್ನು ಬಿಡುತ್ತಲೇ ಇದ್ದೇವೆ, ಅದು ಹೋಗುತ್ತಲೇ ಇದೆ. ಅದು ಅವರ ಬೇಡಿಕೆಗೆ ಅನುಗುಣವಾಗಿರುವಂತಾದ್ದು ಬಿಳಿಗೊಂಡ್ಲುನಲ್ಲಿ ಇರತಕ್ಕಂಥ ನಮ್ಮ ಮಾಪನವನ್ನು ತೆಗೆದು ನೋಡಿದರೆ, ಸುಮಾರು ಹತ್ತಿರ–ಹತ್ತಿರ 38–40 ಟಿಎಂಸಿಗಳಷ್ಟು ನೀರು ಈಗಾಗಲೇ ಅವರಿಗೆ ಮುಟ್ಟಿದೆ. ಕಳೆದ ಎರಡು ದಿವಸಗಳಿಂದಲೂ ಕೂಡ ಒಳ್ಳೆಯ ಧಾರಾಕಾರ ಮಳೆಯಾಗುತ್ತಿದೆ, ನಾವು ಪರ್ಜನ್ಯ ವ್ರತ ಮಾಡದಿದ್ದರೂ ಕೂಡ ಈ ಸಲ ಈ ಸಮಯದಲ್ಲಿ ನಾವು ಆತಂಕಕ್ಕೆ ಒಳಗಾಗಿದ್ದೆವು. ನಮ್ಮ ನೀರಾವರಿ ಸಚಿವರು ಬಂದಿದ್ದಾರೆ, ಅವರು ಇಡೀ ಜಲಾಶಯಗಳ ಮಟ್ಟ ಎಷ್ಟಿದೆ ಎನ್ನತಕ್ಕಂಥದ್ದನ್ನು ಹೇಳುತ್ತಾರೆ. ಆದರೆ ಈ ಸಂದರ್ಭದಲ್ಲಿ, ನಾವು ನಮ್ಮ ಹಣಕಾಸು ಸಚಿವರಾದ ಪೊನ್ನಯ್ಯನ್‌ರವರನ್ನು ಅಲ್ಲಿಗೆ ಕಳುಹಿಸಿದ್ದೆವು, ಆದರೆ ಅವರ ಭೇಟಿಗೆ ಮಾನ್ಯ ಮುಖ್ಯಮಂತ್ರಿಗಳು ನಿರಾಕರಿಸಿದರು ಎನ್ನುವಂತಹ ಸುಳ್ಳು ಆಪಾದನೆಯನ್ನು ಅಲ್ಲಿಯ ಮುಖ್ಯಮಂತ್ರಿಗಳಾದ ಶ್ರೀಮತಿ ಜಯಲಲಿತಾರವರು ಹೇಳುವುದರ ಮೂಲಕವಾಗಿ, ಅವರು ಈ ಒಂದು ಒಕ್ಕೂಟ ರಾಷ್ಟ್ರದ ಪರಿಕಲ್ಪನೆಗೇ ಧಕ್ಕೆಯನ್ನು ಉಂಟು ಮಾಡಿದ್ದಾರೆ.

ಅವರು ಸತ್ಯಕ್ಕೆ ದೂರವಾದ ಮಾತನ್ನು ಮಾತನಾಡಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದು ಇಷ್ಟೆ. ಎರಡೂ ಸದನಗಳು ಸಮಾವೇಶ ಆಗಿವೆ, ವಿತ್ತೀಯ ಕಲಾಪಗಳು ಮತ್ತು ಅನ್ಯ ವಿಚಾರಗಳ ಬಗ್ಗೆ ಗಹನವಾದ ಚರ್ಚೆ ನಡೆಯುತ್ತಿರತಕ್ಕಂತಹ ಈ ಸಂದರ್ಭದಲ್ಲಿ ಸಮಯದ ಅಭಾವ ಇರುವ ಕಾರಣಕ್ಕಾಗಿ ದಯವಿಟ್ಟು ತಾವು ಆಗಸ್ಟ್ ಎರಡನೇ ತಾರೀಖಿನ ದಿವಸ ಬಂದರೆ ನಾವು ನಿಮ್ಮ ಜೊತೆ ಮಾತನಾಡಿ ವಿಷಯವನ್ನು ತಿಳಿಸಲಿಕ್ಕೆ ತಯಾರಿದ್ದೇವೆ ಎಂದು ಪತ್ರ ಬರೆದು ಅವರಿಗೆ ಮನವರಿಕೆ ಮಾಡಿಕೊಟ್ಟರೂ ಕೂಡ ಅವರು ಸತ್ಯಕ್ಕೆ ದೂರವಾದ ವಿಷಯಗಳನ್ನು ಪ್ರಸ್ತಾಪ ಮಾಡುವುದರ ಮೂಲಕ ಒಕ್ಕೂಟದ ಸ್ಪಿರಿಟ್ ಏನಿದೆ, ರಾಜ್ಯಾಂಗ ಬದ್ಧವಾದ ರೀತಿಯಲ್ಲಿ ನೆರೆ ಹೊರೆಯಲ್ಲಿ ಇರಬೇಕಾಗಿರತಕ್ಕಂತಹ ಮಧುರ ಸಂಬಂಧವನ್ನು ಹಾಳುಗೆಡಹುವ ಪ್ರಯತ್ನ ತಮ್ಮ ಸ್ವಾರ್ಥಕ್ಕಾಗಿ ಮಾಡಿರತಕ್ಕಂಥದ್ದು, ತಮ್ಮ ಪಕ್ಷದ ಸ್ವಹಿತಕ್ಕಾಗಿ ಮಾಡಿಕೊಂಡಿರತಕ್ಕಂಥದ್ದು. ಅವರು ಮಾಡಿದ್ದಾರೆಂದು ಇವರು ಮಾಡಿದ್ದಾರೆ, ಅವರು ಪ್ರಾರಂಭ ಮಾಡುತ್ತಿದ್ದಾರೆ. ಆದರೆ ಇವತ್ತು ಎಲ್ಲರಿಗೂ ಗೊತ್ತಿದೆ. ಮೇಲ್ಮನೆಯಲ್ಲಿ ಕೂಡ ಈ ವಿಚಾರ ಪ್ರಸ್ತಾಪ ಮಾಡಿದ್ದು, ಮೇಲ್ಮನೆಯ ಸದಸ್ಯರಾದ ಡಾ: ನಾಡಗೌಡರು "Seeing is believing. ಎಂದು ಹೇಳಿದರು. ಆದ್ದರಿಂದ ಕಬಿನಿಯಿಂದ ಎಷ್ಟು ನೀರು ಹೋಗುತ್ತದೆ ಎನ್ನತಕ್ಕಂಥದ್ದನ್ನು ಎಲೆಕ್ಟ್ರಾನಿಕ್ ಮೀಡಿಯಾ ಮೂಲಕ ತೋರಿಸಿದರೆ ಇಡೀ ಪ್ರಪಂಚಕ್ಕೆ ಗೊತ್ತಾಗುತ್ತದೆ, ನಾವು ಹೆಚ್ಚು ನೀರನ್ನು ಅವರಿಗೆ ಬಿಡುತ್ತಿದ್ದೇವೆ ಎಂದು. ಆ ಕಾರಣಕ್ಕಾಗಿ ಈ ಒಂದು ಮಾತನ್ನು ಈ ಸದನದಲ್ಲಿ ಹೇಳುತ್ತಿದ್ದೇನೆ. ಹಿರಿಯ ಸದಸ್ಯರ ಜೊತೆಗೆ ನಾವು ಇದ್ದೇವೆ. ನೆಲದ, ಜಲದ ಮತ್ತು ಭಾಷೆಯ ವಿಚಾರಗಳಿಗೆ ಸಂಬಂಧಪಟ್ಟ ಹಾಗೆ ನಮ್ಮ ಇಡೀ ಸದನ ಒಂದು ಮಾರ್ಗದರ್ಶನ ಮಾಡಿದೆ. ಅವರು ಯಾವಾಗಲೂ ಕೂಡ ಅಂತಹ ಸವಾಲುಗಳನ್ನು ಸರಿಯಾದ ರೀತಿಯಲ್ಲಿ ಸ್ವೀಕಾರ ಮಾಡಿಕೊಂಡು ಒಮ್ಮತದ ನಿರ್ಣಯಕ್ಕೆ ಎಲ್ಲಾ ಶಾಸಕರು ಪಕ್ಷಾತೀತವಾಗಿ ಬಂದಿದ್ದಾರೆ. ಆ ಕಾರಣಕ್ಕಾಗಿ ಅವರಿಗೆ ಅಭಿನಂದಿಸುತ್ತಾ, ನಿಮ್ಮ ಜೊತೆ ನಾವು ಕೂಡ ಇದ್ದೇವೆ. ಅವರ ಸುಳ್ಳಿನ ತಂತ್ರಕ್ಕೆ ಮೋಸ ಆಗಲಾರದ ರೀತಿಯಲ್ಲಿ ಈಗಾಗಲೇ ಸರಿಯಾದಂಥ

ಉತ್ತರವನ್ನು ಮಾನ್ಯ ಮುಖ್ಯಮಂತ್ರಿಗಳು ಕೊಟ್ಟಿದ್ದಾರೆ. ಬೇರೆ ಬೇರೆ ಅಣೆಕಟ್ಟುಗಳು ಏನಾಗಿವೆ ಎಂದು ಹಿರಿಯ ಸಚಿವರಾದ ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಕೊಡುತ್ತಾರೆ. ನಾಳೆ ಮತ್ತೆ ಸದನಕ್ಕೆ ಬಂದಾಗ ಮುಖ್ಯಮಂತ್ರಿಗಳು ತಮಗೆ ಆತಂಕ ಏನಾದರೂ ಇದ್ದರೆ ಅದಕ್ಕೆ ಕೂಡ ಉತ್ತರ ಕೊಡುತ್ತಾರೆ. ಈಗ ಯಾವುದೇ ಕಾರಣಕ್ಕಾಗಿ ಒತ್ತಡಕ್ಕೆ ಮಣಿಯುವ ಪ್ರಶ್ನೆ ಇಲ್ಲ. ನಾವು ಈ ಸಂದರ್ಭದಲ್ಲಿ ಹೇಳುತ್ತೇವೆ, ಯಾವ ಕಾರಣಕ್ಕೆ ಕೂಡ ನಾವು ನ್ಯಾಯಾಧಿಕರಣದ ಮುಂದೆ ಪ್ರಸ್ತಾಪ ಮಾಡಿದಂಥ ರೀತಿಯಲ್ಲಿ ನಮಗೆ ಲಭ್ಯತೆ ಇರತಕ್ಕಂತಹ ನೀರನ್ನು ಕಾಲಕಾಲಕ್ಕೆ ನಾವು ಬಿಟ್ಟಿದ್ದೇವೆ.

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಅಧ್ಯಕ್ಷರೆ, ಒಂದು ಪ್ರಶ್ನೆ ನನ್ನದು. ಮಾನ್ಯ ಜಲ ಸಂಪನ್ಮೂಲ ಸಚಿವರು ಬಂದಿದ್ದಾರೆ. ಪ್ರಧಾನ ಮಂತ್ರಿಗಳು ದೂರವಾಣಿ ಮೂಲಕ ಕರ್ನಾಟಕ ರಾಜ್ಯದ ಮುಖ್ಯಮಂತ್ರಿಗಳ ಜೊತೆ ಮಾತನಾಡುತ್ತಾರೆಂದು ಹೇಳಿರತಕ್ಕಂಥದ್ದು ಪತ್ರಿಕೆಗಳಲ್ಲಿ ಬಂದಿದೆ: ಮಾತನಾಡಿದ್ದಾರೆಂದೂ ಕೂಡ ಪತ್ರಿಕೆಗಳಲ್ಲಿ ಬಂದಿದೆ. ನಾನು ಅವರನ್ನು ಈ ಸಂದರ್ಭದಲ್ಲಿ ಕೇಳುತ್ತಿದ್ದೇನೆ, ಏನು ಮಾತುಕತೆ ಆಯಿತು, ನಮ್ಮ ಪರಿಸ್ಥಿತಿ ಏನು ಅವರು ಅಲ್ಲಿ ಮಾಡುತ್ತಿರತಕ್ಕಂತಹ ರಾಜಕೀಯದ ಬಗ್ಗೆ ನಮ್ಮ ಕರ್ನಾಟಕ ಸರ್ಕಾರದ ಸ್ಪಷ್ಟ ನಿಲುವು ಏನು? ಅದರ ಬಗ್ಗೆ ಪ್ರಧಾನ ಮಂತ್ರಿಯವರು ಏನಾದರೂ ಹೇಳಿದ್ದಾರಾ? ಸದನದ ಮುಂದೆ ಹೇಳಿ. ಅದನ್ನು ಗೋಪ್ಯವಾಗಿ ಇಡತಕ್ಕಂತಹ ಪ್ರಶ್ನೆ ಅಲ್ಲ. ಆದ್ದರಿಂದ ಮಾನ್ಯ ಸಚಿವರಾದ ಖರ್ಗೆಯವರಿಗೆ ಈ ಸಂದರ್ಭದಲ್ಲಿ ಈ ಸದನದ ಮುಂದೆ ಹೇಳಿಕೆ ಕೊಡಬೇಕೆಂದು ಒತ್ತಾಯ ಮಾಡುತ್ತೇನೆ.

ಶ್ರೀ ಎಸ್. ರಾಜೇಂದ್ರನ್: ಮಾನ್ಯ ಅಧ್ಯಕ್ಷರೆ, ಮಾನ್ಯ ಈಶ್ವರಪ್ಪನವರು ಹೇಳಿದರು, ಮಾನ್ಯ ಶ್ರೀಮಾನ್ ಎಸ್.ಎಂ. ಕೃಷ್ಣರವರು ಏನೇ ಬಂದರೂ ಖರ್ಚಿ ಹೋದರೂ ನೀರು ಕೊಡುವುದಿಲ್ಲವೆಂದು ಹೇಳಿದರು. ಈಗ ಮಳೆ ಬಂದು ಡ್ಯಾಂ ತುಂಬಿದೆ, ಆ ತರಹ ಏನಾದರೂ ಏನೇ ಬಂದರೂ ಎಂದರೆ ಡ್ಯಾಂ ಡ್ಯಾಮೇಜ್ ಆಗುತ್ತದೆ. ಅದರ ಬಗ್ಗೆ ಚಿಂತನೆ ಮಾಡಿಕೊಂಡು ತಾವು ಕೆಲಸ ಮಾಡಬೇಕು. ಏನೇ ಬಂದರೂ ಖರ್ಚಿ ಹೋದರೂ ಎಂದರೆ ಅಲ್ಲಿಯ ಡ್ಯಾಂ ಡ್ಯಾಮೇಜ್ ಆಗುತ್ತದೆ. ನೀರು ಅಷ್ಟು ಬಂದಿದೆ ಎಂದು ಹೇಳಿದಿರಿ. ಅದನ್ನೂ ಸ್ವಲ್ಪ ಚಿಂತನೆ ಮಾಡಿಕೊಂಡು ಕೆಲಸ ಮಾಡಬೇಕು.

ಉಪಾಧ್ಯಕ್ಷರು: ಜಗದೀಶ್ ಶೆಟ್ಟರ್‌ರವರೆ, ಬಹಳ ಆಗಿದೆ. ಉತ್ತರ ಕೊಡಲಿ. ಬಹಳ ಜನ ಮಾತನಾಡುವವರಿದ್ದಾರೆ. ಒಂದು ನಿಮಿಷ ಎಂದರೆ, ಅರ್ಧ ಗಂಟೆ ಮಾತನಾಡುತ್ತೀರಿ.

ಶ್ರೀ ಜಗದೀಶ್ ಶೆಟ್ಟರ್: ಮಾನ್ಯ ಉಪಾಧ್ಯಕ್ಷರೆ, ಒಂದೇ ನಿಮಿಷದಲ್ಲಿ ಮುಗಿಸುತ್ತೇನೆ. ಬೆಳಿಗ್ಗೆ ಪತ್ರಿಕೆಯಲ್ಲಿ ಬಂದಿದೆ, ತಮಿಳುನಾಡಿನ ಮುಖ್ಯಮಂತ್ರಿಗಳು ದೆಹಲಿಯಲ್ಲಿ ಉಪವಾಸ ಸತ್ಯಾಗ್ರಹ ಕೂರುತ್ತಿದ್ದಾರೆ ಎಂದು. ಎಂಟು ಗಂಟೆಗಳ ಕಾಲ ಉಪವಾಸ ಸತ್ಯಾಗ್ರಹ ಕೂರುತ್ತಿದ್ದಾರೆ. ಅಲ್ಲಿ ಉಪವಾಸ ಸತ್ಯಾಗ್ರಹ ಮಾಡುವುದು ಮತ್ತು ಇಡೀ ತಮಿಳುನಾಡಿನಲ್ಲಿ ಎಲ್ಲಾ ಕಡೆ ಉಪವಾಸ ಸತ್ಯಾಗ್ರಹ ಮಾಡುವುದು ಏನು ತೋರಿಸುತ್ತದೆ ಎಂದರೆ, ಕರ್ನಾಟಕವನ್ನು ಅಪರಾಧಿ ಸ್ಥಾನದಲ್ಲಿ ನಿಲ್ಲಿಸುವುದು ಅದಕ್ಕಾಗಿ ನಮ್ಮ ಕರ್ನಾಟಕ ಎಚ್ಚರ ಆಗಬೇಕಾಗಿದೆ. ನಮ್ಮ ಮುಖ್ಯಮಂತ್ರಿಗಳು ಹಾಗೂ ಮಾನ್ಯ ನೀರಾವರಿ ಸಚಿವರು ಪ್ರಧಾನ ಮಂತ್ರಿಯವರು ಮೇಲೆ ಒತ್ತಡ ತರುವಂಥದ್ದು ಮಾಡಬೇಕಾಗಿದೆ. ನಮ್ಮ ಪರಿಸ್ಥಿತಿ ಏನಿದೆ ಎಂಬುದನ್ನು ಹೇಳಬೇಕಾಗುತ್ತದೆ. ನಮ್ಮ ನೀರಿನ ಪರಿಸ್ಥಿತಿ ಏನಿದೆ, ಜಲಾಶಯದ ಮಟ್ಟ ಏನಿದೆ, ಇವೆಲ್ಲಾ ಮನವರಿಕೆ ಮಾಡಿಕೊಡುವುದು ಆಗಬೇಕು. ಅಂದಾಗ ಮಾತ್ರ ಕೇಂದ್ರ ಸರ್ಕಾರಕ್ಕೆ ಮನವರಿಕೆಯಾಗಲು ಸಾಧ್ಯ ಇದೆ, ಮತ್ತು ತಮಿಳುನಾಡಿಗೂ ಮನವರಿಕೆ ಆಗುವುದಕ್ಕೆ ಸಾಧ್ಯ ಇದೆ. ಇಲ್ಲದಿದ್ದರೆ, ನಾವು ಅಪರಾಧಿ ಸ್ಥಾನದಲ್ಲಿ ನಿಲ್ಲುವ ಸಾಧ್ಯತೆ ಇದೆ. ಸರ್ಕಾರ ಇವತ್ತು ದೃಢವಾದ ನಿಲುವು ತೆಗೆದುಕೊಳ್ಳಬೇಕು.

ಶ್ರೀ ಮಲ್ಲಿಕಾರ್ಜುನ ಖರ್ಗೆ (ನೀರಾವರಿ ಸಚಿವರು): ಮಾನ್ಯ ಉಪಾಧ್ಯಕ್ಷರೆ, ಈಗಾಗಲೇ ಹಿರಿಯ ಸಚಿವರಾದ ಶ್ರೀಮಾನ್ ಪ್ರಕಾಶ್‌ರವರು ಸ್ಪಷ್ಟನೆ ಕೊಟ್ಟಿದ್ದಾರೆ. ಯಾವ ಉದ್ದೇಶಕ್ಕೆ ಅವರು ಅಲ್ಲಿ ನೀರನ್ನು ಬಿಟ್ಟು ರಾಜಕಾರಣ ಮಾಡುತ್ತಿದ್ದಾರೆ, ಮತ್ತು ಪ್ರಧಾನ ಮಂತ್ರಿಯವರಿಗೆ ಭೇಟಿಯಾಗಿ ಪದೇ ಪದೇ ಮನವಿಯನ್ನು ಕೊಟ್ಟು ಅವರ ಮೇಲೆ ಒತ್ತಡ ತರತಕ್ಕಂಥದ್ದು ಮಾಡುತ್ತಿದ್ದಾರೆಂದು ಈಗಾಗಲೇ ಅವರು ಸ್ಪಷ್ಟಪಡಿಸಿದ್ದಾರೆ. ಮತ್ತು ವಾಟಾಳ್ ನಾಗರಾಜ್‌ರವರು ಅವರು ಎತ್ತಿದ್ದರ ಬಗ್ಗೆ ನನ್ನದು ಮೊದಲನೇ ಅಬ್ಜೆಕ್ಷನ್ ಅವರು ಮೊದಲು ಎತ್ತಿದ್ದರ ಮೇಲೆ ನಾವು ಉತ್ತರ ಕೊಟ್ಟಾಗ ಅವರು ವಾಕ್ ಔಟ್ ಮಾಡಿ ಹೋದರು. ಒಂದು ಸಾರಿ ವಾಕ್ ಔಟ್ ಮಾಡಿ ಹೋದ ಮೇಲೆ ಆ ವಿಷಯವನ್ನು ಪುನಃ ಪ್ರಸ್ತಾಪ ಮಾಡುವ ಹಾಗೆ ಇಲ್ಲ. ಎರಡನೇ ಸಾರಿ ಬಂದು ಮತ್ತೆ ಧರಣಿ ಕೂರುವುದು, ಇದನ್ನು ಪದೇ ಪದೇ ಮಾಡುತ್ತಿದ್ದಾರೆ.

ಶ್ರೀ ವಾಟಾಳ್ ನಾಗರಾಜ್: ಪ್ರವಾಹ ಬರುತ್ತಿದೆ. ಆದ್ದರಿಂದ ಯಾವ ಗಳಿಗೆಯಲ್ಲಿ ಈ ಪ್ರವಾಹ ನಿಲ್ಲುತ್ತದೆ ಎಂದು ಹೇಳುವುದಕ್ಕಾಗುವುದಿಲ್ಲ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಪುನಃ ಮತ್ತೆ ಬಂದು ಈ ವಿಷಯ ಎತ್ತಿದ್ದಾರೆ; ಸಂತೋಷ. ಆದರೆ ಇವತ್ತು ನಾವು ಈಗಾಗಲೇ ಹೇಳಿದ್ದೇವೆ, ನಮ್ಮ ಕಬಿನಿಯಿಂದ ನೀರು ಬೆಳಗೊಂಡ್ಲಿಗೆ ಸುಮಾರು 41,000 ಕ್ಯೂಸೆಕ್ಸ್ ಹೋಗುತ್ತಿದೆ. ಅಂದರೆ ಹೆಚ್ಚು ಕಡಿಮೆ ನಾಲ್ಕು ಟಿಎಮ್‌ಸಿ ನೀರು ಹೋಗಿದೆ. ಬಹುಶಃ ಇದೇ ರೀತಿ ಮಳೆ ಬಂದರೆ ಎರಡು–ಮೂರು ದಿವಸಗಳಲ್ಲಿ ಸಂಪೂರ್ಣವಾಗಿ ಆ ನೀರು ಅವರಿಗೆ ಮುಟ್ಟುತ್ತದೆ. ಆದರೆ ಅದಕ್ಕಿಂತ ಮುಂಚೆ ಅವರು ಏಕೆ ಈ ರೀತಿಯಾಗಿ ಪದೇ ಪದೇ ಒತ್ತಡ ತರುತ್ತಿದ್ದಾರೆ ನನಗೆ ಅರ್ಥವಾಗುತ್ತಿಲ್ಲ. ನನಗನ್ನಿಸಿದ ಮಟ್ಟಿಗೆ ಫೆಬ್ರವರಿಯಲ್ಲಿ ಚುನಾವಣೆ ಇದೆ. ಈಗ ನಾವು ಜುಲೈ ತಿಂಗಳಲ್ಲಿ ಇದ್ದೇವೆ. ಹೆಚ್ಚು ಕಡಿಮೆ ಒಂದು ಆರೇಳು ತಿಂಗಳುಗಳಲ್ಲಿ ಚುನಾವಣೆಗೆ ಹೋಗಬೇಕು. ಆಗ ಇದರ ನೆನಪು ಬರುತ್ತದೆ, ಇಲ್ಲದಿದ್ದರೆ ನಾವು ಎಂದೂ ಕೂಡ ನೀರು ಇದ್ದು ಬಿಡುವುದಿಲ್ಲವೆಂದು ಹೇಳುವುದಿಲ್ಲ. ನೀರು ಬಂದ ಹಾಗೆ ಬಿಡುತ್ತೇವೆಂದು ಹೇಳಿದ್ದೇವೆ. ಮತ್ತು ನಮ್ಮ ರೈತರ ಹಿತವನ್ನು ಕಾಪಾಡಿ, ನಮ್ಮ ರೈತರಿಗೆ ಎಷ್ಟು ನೀರು ಬೇಕು ಅದನ್ನು ಇಟ್ಟುಕೊಂಡು ಉಳಿದ ನೀರನ್ನು ನ್ಯಾಯಯುತವಾಗಿ ಬಿಡತಕ್ಕಂಥದ್ದು ಬಿಡುತ್ತೇವೆ ಎನ್ನತಕ್ಕಂತಹ ಮಾತನ್ನು ಹೇಳುತ್ತೇವೆ. ಎಂದೂ ಕೂಡ ನಾವು ಖಡಾಖಂಡಿತವಾಗಿ ಹೇಳಲಿಲ್ಲ. ನಮ್ಮಲ್ಲಿ ನೀರು ಬಂದರೂ ನಿಮಗೆ ಬಿಡುವುದಿಲ್ಲವೆಂದು ಹೇಳಲಿಲ್ಲ. ಇದು ಒಂದು. ಎರಡನೆಯದು ಇವತ್ತು ನಾವೇ ಹೋಗಿ ಪ್ರಧಾನ ಮಂತ್ರಿಗಳನ್ನು ಕೇಳುವುದು ಚೆನ್ನಾಗಿ ಇರುವುದಿಲ್ಲ. ಮತ್ತು ಅದರ ಅವಶ್ಯಕತೆ ಕೂಡ ಇಲ್ಲ. ಒಂದು ವೇಳೆ ಅವರು ಏನು ಟೀಮ್ ಕಾನ್‌ಸ್ಟಿಟ್ಯೂಟ್ ಮಾಡಿದ್ದಾರೆಂದು ನಾನೂ ಕೂಡ ಪತ್ರಿಕೆಯಲ್ಲಿ ಓದಿದೆ, ಶ್ರೀಮತಿ ಜಯಲಲಿತಾರವರೂ ಕೂಡ ಅದಕ್ಕೆ ಅಬ್ಜೆಕ್ಷನ್ ಮಾಡಿದ್ದಾರೆ. ನಾವೇಕೆ ನೇರವಾಗಿ ಬಂದು ನಿಮಗೆ ಮನವಿ ಕೊಟ್ಟಮೇಲೆ, ನೀವು ಪುನಃ ಟೀಮ್ ಏಕೆ ಕಳುಹಿಸಬೇಕು? ಏಕೆ ನೀವು ಮೆಟ್ಟೂರು ಡ್ಯಾಮ್ ಮತ್ತು ಕರ್ನಾಟಕದ ಡ್ಯಾಂ ಏಕೆ ನೋಡಬೇಕು? ನಮ್ಮ ಮೇಲೆ ನಂಬಿಕೆ ಇಲ್ಲವೇ ಎನ್ನತಕ್ಕಂತಹ ಮಾತನ್ನ ಅವರೇ ಹೇಳಿದ್ದಾರೆ. ಶ್ರೀಮಾನ್ ದಾಸ್‌ಮುನ್ಸಿಯವರ ನೇತೃತ್ವದಲ್ಲಿ ಟೀಮ್ ಬರತಕ್ಕಂತಹ ಅವಶ್ಯಕತೆ ಇಲ್ಲ. ನಮ್ಮ ಮನವಿ ಏನು ಕೊಟ್ಟಿದ್ದೇವೆ, ಅದರ ಮೇಲೆ ಅವರು ಕ್ರಮವನ್ನು ಜರುಗಿಸಬೇಕು ಎನ್ನತಕ್ಕಂತಹ ಮಾತನ್ನು ಹೇಳಿದ್ದಾರೆ. ಟೀಮ್ ಬರುವುದಕ್ಕೆ ಒಂದು ಕಡೆ ಅವರು ಸಸ್ಪಿಷನ್, ಎರಡನೇ ಕಡೆ ಅವರು ಕೊಟ್ಟಂತಹ ಮನವಿ ಮೇಲೆ ಆ್ಯಕ್ಟ್ ಮಾಡಬೇಕು.

ಬೇರೆ ಫ್ಯಾಕ್ಸ್ ಅಥವಾ ವಾತಾವರಣವನ್ನು ತಿಳಿದುಕೊಳ್ಳಬಾರದು ಎಂಬುದೂ ಕೂಡ ಅವರ ಅನಿಸಿಕೆ ಎಂದು ಅವರ ಹೇಳಿಕೆ ಮೇಲೆ ಗೊತ್ತಾಗುತ್ತದೆ. ಆದ್ದರಿಂದ ನಾನು ಹೆಚ್ಚಿನ ಮಾತು ಬೆಳೆಸುವುದಕ್ಕೆ ಹೋಗುವುದಿಲ್ಲ. ನೀರು ಈಗಾಗಲೇ ಹೋಗುತ್ತಿದೆ, ಅವರಿಗೆ ಎಷ್ಟು ನೀರು ಅವಶ್ಯಕತೆ ಇದೆ, ಬಹುಶಃ ನೀರಿನ ಕೊರತೆ ಮೂರು–ನಾಲ್ಕು ದಿವಸಗಳಲ್ಲಿ ನೀಗುತ್ತದೆ. ಮತ್ತು ಮಳೆ ಈಗಾಗಲೇ ಪ್ರಾರಂಭವಾಗಿದೆ, ತಮಗೆ ಗೊತ್ತಿದೆ, ಇಡೀ ಕೂರ್ಗ್ ಭಾಗದಲ್ಲಿ ಆಗಲಿ, ಕೇರಳ ಭಾಗದಲ್ಲಾಗಲಿ ಹೆಚ್ಚಿನ ಮಳೆ ಬರುತ್ತಿದೆ ಅದಕ್ಕೆ ಅವರು ಸಂತೋಷ ಪಡಬೇಕು. ಅದನ್ನು ಬಿಟ್ಟು ಸುಮ್ಮಸುಮ್ಮನೆ, ನಮ್ಮ ಕಡೆ ಹೇಳುತ್ತಾರೆ. ಅಂದರೆ "ಕಾಲು ಕೆರೆದು ಜಗಳ ತೆಗೆಯುವುದು" ಎಂದು. ಕಾರಣ ಇಲ್ಲದೆ ಸುಮ್ಮನೆ ಇದನ್ನು ಪ್ರಾರಂಭ ಮಾಡಿದ್ದಾರೆ. ಇವತ್ತು ತಮಿಳುನಾಡಿನಲ್ಲಿ ಇರತಕ್ಕಂತಹ ರೈತರ ಬಗ್ಗೆ ನಮಗೆ ಕಾಳಜಿ ಇದೆ. ನಮ್ಮಲ್ಲಿ ಇರತಕ್ಕಂತಹ ರೈತರ ಬಗ್ಗೆ ಅಷ್ಟೇ ಕಾಳಜಿ ಇದೆ. ಇಬ್ಬರೂ ಬದುಕಬೇಕು ಎನ್ನುವುದೇ ನಮ್ಮ ವ್ಯವಸ್ಥೆ. ಆದರೆ ಇಬ್ಬರೂ ಬದುಕುವಾಗ ಇನ್ನೊಬ್ಬರಿಗೆ ನಾವು ನ್ಯಾಯ ಮಾಡುವಾಗ ನಮಗೆ ಅನ್ಯಾಯವಾಗಬಾರದು. ಆ ದೃಷ್ಟಿಯಿಂದ ನಾವು ನಡೆದುಕೊಳ್ಳಬೇಕಾಗಿದೆಯೇ ಹೊರತು, ಇಲ್ಲ ನಮಗೆ ಏನಾದರಾಗಲಿ ಇನ್ನೊಬ್ಬರಿಗೆ ನ್ಯಾಯ ಕೊಡಿ ಎಂದರೆ, ಇನ್ನೊಬ್ಬರಿಗೆ ಸಹಾಯ ಮಾಡಿ ಎಂದರೆ ಅದು ತಪ್ಪಾಗುತ್ತದೆ. ನಾವು ಅವರಿಗೆ ಅನ್ಯಾಯ ಮಾಡುವುದಿಲ್ಲ. ನೀರು ಏನು ಬರುತ್ತದೆ ಅದನ್ನು ಬಿಡುತ್ತಿದ್ದೇವೆ. ಈಗಾಗಲೇ ಪ್ರತಿ ದಿವಸ ಬೆಳಗೊಂಡ್ಲದಲ್ಲಿ ನಾಲ್ಕು ಟಿಎಮ್‌ಸಿ ಮೇಲೆ ನೀರನ್ನು ಬಿಡುತ್ತಿರುವುದು ರೆಕಾರ್ಡ್ ಆಗುತ್ತಿದೆ. ಬಹುಶಃ ಅವರು ಸಂತೋಷಪಡುತ್ತಾರೆಂದು ನಾನು ಭಾವಿಸಿದ್ದೇನೆ. ಇದಕ್ಕಿಂತಲೂ ಹೆಚ್ಚಿನ ಒಂದು ಪ್ರಯತ್ನ ಅವರು ಮಾಡುವುದು, ಎಐಎಡಿಎಂಕೆ ಮುಖಂಡರೇ ಫಾಸ್ಟ್ ಮಾಡುತ್ತಾರೆ, ಫಾರ್ಮರ್ಸ್ ಒಂದು ಕಡೆ ಉಳಿದರು ಪಾಪ, ರೈತರು ಇಲ್ಲಿಗೆ ಬಂದು ಅನೇಕ ಸಾರಿ ಎಲ್ಲಾ ನೋಡಿಕೊಂಡು ಹೋಗಿದ್ದಾರೆ. ಅವರು ಅಲ್ಲಿ ಒಂದು ಕಡೆ ಕುಳಿತಿದ್ದಾರೆ. ಆದರೆ ಈ ಲೀಡರ್ಸ್‌ಗಳೇ ನಾವು ಫಾಸ್ಟ್ ಮಾಡುತ್ತೇವೆ ಎಂದು ಇವೊತ್ತು ಬರುತ್ತಿದ್ದಾರೆ. ಅದಕ್ಕಾಗಿ ನಾವು ಇದರ ಬಗ್ಗೆಯೂ ಕೂಡ ಚಿಂತನೆ ಮಾಡತಕ್ಕಂಥ ಅವಶ್ಯಕತೆ ಇದೆ. ಅದರ ಜೊತೆಜೊತೆಯಲ್ಲಿ ಈಗ ಸಧ್ಯ ನೀರು ಹೋಗುತ್ತಿರುವುದರಿಂದ ಯಾರೂ ಕೂಡ ಆತಂಕ ಪಡತಕ್ಕಂಥದ್ದೂ ಇಲ್ಲ ಮತ್ತು ತಮಿಳುನಾಡಿನ ಜನತೆಗೆ, ಅಲ್ಲಿನ ರೈತರಿಗೂ ಕೂಡ ನಾನು ಅಪೀಲ್ ಮಾಡುತ್ತೇನೆ, ಹೀಗೆಲ್ಲಾ ಚಳುವಳಿ ಮಾಡುತ್ತೇವೆ ಎನ್ನತಕ್ಕಂಥದ್ದು, ಧಮಕಿ ಹಾಕತಕ್ಕಂಥದ್ದು, ಫಾಸ್ಟ್ ಮಾಡುತ್ತೇವೆ ಎಂದು ಹೇಳಿ ಧಮಕಿ ಹಾಕತಕ್ಕಂಥದ್ದು ಸರಿಯಲ್ಲ. ನಾವು ಇವೊತ್ತು ಒಂದು ಸ್ವತಂತ್ರ ಭಾರತದಲ್ಲಿ ಈ ಒಂದು ಫೆಡರಲ್ ಸ್ಟ್ರಕ್ಚರ್ ಗೌವರ್ನ್‌ಮೆಂಟ್ ಇದೆ. ಅದಕ್ಕಾಗಿ ನಾವೆಲ್ಲರೂ ಕೂಡ ಒಬ್ಬರಿಗೊಬ್ಬರು ಬಾಂಧವ್ಯತೆಯಿಂದ, ಬಂಧುಪ್ರೇಮದಿಂದ ಇರತಕ್ಕಂಥದ್ದು ಬಹಳ ಮುಖ್ಯ. ಆ ಬಂಧುಪ್ರೇಮವನ್ನು ಕೆಡಿಸತಕ್ಕಂಥದ್ದು ಅಥವಾ ನಮ್ಮ ಒಗ್ಗಟ್ಟಿಗೆ ತೊಂದರೆ ತರತಕ್ಕಂಥ ಕೆಲಸವನ್ನು ಯಾರೂ ಮಾಡಬಾರದು. ಆ ದೃಷ್ಟಿಯಿಂದ ಅವರು ಸಂಯಮವನ್ನು ಇಟ್ಟುಕೊಂಡು ತಾಳ್ಮೆಯಿಂದ ನಡೆದುಕೊಳ್ಳಬೇಕು. ನೀರು ಖಂಡಿತವಾಗಿ ಹೋಗುತ್ತಿದೆ. ಅವರಿಗೆ ಆ ನೀರು ಮುಟ್ಟಿದೆ.

ಶ್ರೀ ವಾಟಾಳ್ ನಾಗರಾಜ್: ಈಗ ಪ್ರಧಾನಮಂತ್ರಿಗಳನ್ನು ಎ.ಐ.ಡಿ.ಎಂ.ಕೆ. ಮತ್ತು ಡಿ.ಎಂ.ಕೆ. ಅವರು ಎರಡು ಬಾರಿ ಭೇಟಿ ಮಾಡಿದರು. ನಮ್ಮ ನಿಲುವೇನು ಎಂದು ಹೇಳಿ, ನಮ್ಮ ಸರ್ಕಾರದವರು, ನಾವು ಏನು ಮಾಡಬೇಕು? ಈಗ ಪ್ರಧಾನಮಂತ್ರಿಗಳು ಹೇಳಿದ ಮೇಲೆ ಅದು ಕಡೆಯ ವಿಚಾರವಾಯಿತು. ಈಗ ನಾವೇನು ಮಾಡಬೇಕು ಎನ್ನತಕ್ಕಂಥದ್ದನ್ನು ಹೇಳುವುದಕ್ಕೆ ತಾವು ಪ್ರಧಾನಮಂತ್ರಿಗಳನ್ನು ಭೇಟಿ ಮಾಡುವುದಕ್ಕೆ ವ್ಯವಸ್ಥೆ ಮಾಡಿಕೊಂಡಿದ್ದೀರಾ? ಪ್ರಧಾನಮಂತ್ರಿಗಳನ್ನು ತಾವು ಭೇಟಿ ಮಾಡುತ್ತೀರಾ ಎನ್ನತಕ್ಕಂಥದ್ದು ನನ್ನ ಮನ

ಶ್ರೀ ಎಂ.ಪಿ. ವೆಂಕಟೇಶ್(ಹೆಗ್ಗಡದೇವನಕೋಟೆ): ಮಾನ್ಯ ಉಪಾಧ್ಯಕ್ಷರೆ, ವಾಟಾಳ್ ನಾಗರಾಜ್‌ರವರೆ, ಕೇಂದ್ರ ಸರ್ಕಾರವಾಗಲಿ ಅಥವಾ ರಾಜ್ಯ ಸರ್ಕಾರವಾಗಲಿ ನೀರು ಬಿಡುವುದಕ್ಕೆ ಆದೇಶ ಕೊಟ್ಟರೂ ಕೂಡ ನೀರನ್ನು ಬಿಡುವುದಕ್ಕೆ ರೈತರು ತಯಾರಿಲ್ಲ. ರೈತರು ಒಂದು ಹನಿ ನೀರನ್ನೂ ಬಿಡುವುದಿಲ್ಲ. ಅದು ವಾಟಾಳ್ ನಾಗರಾಜ್‌ರವರಿಗೂ ಗೊತ್ತು. ಮೈಸೂರು ಜಿಲ್ಲೆ, ಹೆಗ್ಗಡ ದೇವನಕೋಟೆ ಜನ ಕೇಂದ್ರ ಸರ್ಕಾರ, ರಾಜ್ಯ ಸರ್ಕಾರ ಆದೇಶ ಕೊಟ್ಟರೂ ನೀರು ಬಿಡುವುದಕ್ಕೆ ತಯಾರಿಲ್ಲ. ಆ ರೀತಿಯ ಭ್ರಮೆ ಬೇಡ. ನೀರು ಬಿಡುವುದಕ್ಕೆ ಅವಕಾಶವನ್ನು ಕೊಡುವುದಿಲ್ಲ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಉಪಾಧ್ಯಕ್ಷರೆ, ವಾಟಾಳ್‌ರವರು ಇನ್ನೊಂದು ಮಾತನ್ನು ಹೇಳಿದರು: ನನಗೆ ನೆನಪು ಹೋಯಿತು. ಏನೋ ಪ್ರಧಾನಮಂತ್ರಿಗಳವರಿಗೆ ಮಾನ್ಯ ಮುಖ್ಯಮಂತ್ರಿಗಳವರು ಟೆಲಿಫೋನ್‌ನಲ್ಲಿ ಮಾತನಾಡಿದ್ದಾರೆ. ಅದು ಏನು ಮಾತನಾಡಿದ್ದಾರೆ ಎನ್ನತಕ್ಕಂಥದ್ದು ನಮಗೆ ಗೊತ್ತಾಗಬೇಕು. ಅದಕ್ಕಾಗಿ ಅದರ ಬಗ್ಗೆ ಹೇಳಬೇಕು ಎಂದರು. ಮಾನ್ಯ ಮುಖ್ಯಮಂತ್ರಿಗಳು ಬರುತ್ತಾರೆ. ನಾನೇನು ತಿಳಿದುಕೊಂಡಿದ್ದೆ ಎಂದರೆ ಮುಖ್ಯಮಂತ್ರಿಗಳು ಟೆಲಿಫೋನ್‌ನಲ್ಲಿ ಮಾತನಾಡಿದ ಮೇಲೆ ತಕ್ಷಣ ವಾಟಾಳ್‌ನಾಗರಾಜ್‌ರವರಿಗೆ ತಿಳಿಸಿರಬೇಕು ಎಂದು ನನ್ನ ಭಾವನೆ ಇತ್ತು. ಏಕೆಂದರೆ ಯಾವಾಗಲೂ ಕೂಡ ಇಂಥ ಮಾತುಕತೆ ಆದರೆ ಮೊದಲನೆಯ ಟೆಲಿಫೋನ್ ಇವರಿಂದ ಅವರಿಗೆ ಹೋಗುವುದು, ಅವರಿಂದ ಇವರಿಗೆ ಬರುವುದು ಇದೆ. ಬಹುಶಃ ಅವರಿಗೆ ಗೊತ್ತಿರಬಹುದು.

ಶ್ರೀ ವಾಟಾಳ್ ನಾಗರಾಜ್: ಇದು ಒಳ್ಳೆಯ ಮಾತಿನ ದೊಡ್ಡ ಪಿತೂರಿ ಇದು.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಅದಕ್ಕೆ ಇವೊತ್ತು ಸಾಯಂಕಾಲ ಮಾನ್ಯ ಮುಖ್ಯಮಂತ್ರಿಗಳು ಹೈದರಾಬಾದ್‌ನಿಂದ ಬರುತ್ತಾರೆ. ಅವರು ಬಂದಮೇಲೆ ಅದರ ಬಗ್ಗೆ ಪ್ರಸ್ತಾಪ ಮಾಡಲಿ.

5. ಪ್ರಕಟಣೆ

ವಿಷಯ: ಮಾನ್ಯ ಕಂದಾಯ ಸಚಿವರಿಂದ ಮಾನ್ಯ ಸದಸ್ಯರುಗಳಿಗೆ ಭೋಜನಕೂಟದ ಏರ್ಪಾಡು.

ಉಪಾಧ್ಯಕ್ಷರು: ಈಗ ಇಲ್ಲೊಂದು ಪ್ರಕಟಣೆ ಇದೆ. ಮಾನ್ಯ ಎಂ.ಪಿ. ಪ್ರಕಾಶ್, ಕಂದಾಯ ಸಚಿವರು, ಈ ದಿನ ಮಧ್ಯಾಹ್ನ 1.30 ಕ್ಕೆ ವಿಧಾನ ಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ಏರ್ಪಡಿಸಿರುವ ಭೋಜನ ಕೂಟದಲ್ಲಿ ಭಾಗವಹಿಸಲು ತಮ್ಮನ್ನು ಆಹ್ವಾನಿಸಲಾಗಿದೆ. ತಾವುಗಳೆಲ್ಲರೂ ಭಾಗವಹಿಸಬೇಕೆಂದು ಕೋರುತ್ತೇನೆ. ಈಗ ಸದನವನ್ನು ಮಧ್ಯಾಹ್ನ 3.00 ಗಂಟೆಗೆ ಸೇರುವಂತೆ ಮುಂದೂಡಲಾಗಿದೆ.

(ಸದನವು ಮಧ್ಯಾಹ್ನ 1 ಗಂಟೆ 52 ನಿಮಿಷಕ್ಕೆ ಮುಂದೂಡಲ್ಪಟ್ಟು ಮತ್ತೆ ಮಧ್ಯಾಹ್ನ 3.00 ಗಂಟೆಗೆ ಸಮಾವೇಶಗೊಳ್ಳಲು ನಿಶ್ಚಯಿಸಿತು.)

(ಸದನವು ಮಧ್ಯಾಹ್ನ 3.07ಕ್ಕೆ ಸಮಾವೇಶಗೊಂಡಿತು. ಮಾನ್ಯ ಅಧ್ಯಕ್ಷರು (ಶ್ರೀಕೃಷ್ಣರವರು) ಅಧ್ಯಕ್ಷ ಪೀಠವನ್ನಲಂಕರಿಸಿದರು)